ಸಂಜೆ ತಣ್ಣಗಿತ್ತು. ಆಕಾಶದ ಕಡೆ ನೋಡಿದ. ಒಂದಷ್ಟು ಹಕ್ಕಿಗಳು ಹಾರಿಕೊಂಡು ಮುಂದೆ ಸಾಗಿದವು. ಅವನು ಕೈಗಳನ್ನು ಅಗಲಿಸಿ ಅವನ್ನೇ ರೆಕ್ಕೆಗಳು ಎಂದುಕೊಂಡು ಹಾರುವಂತೆ ಮಾಡಿದ. ಸಾಧ್ಯವಾಗದೆ ಸಪ್ಪಗಾದ. ಎಷ್ಟೋ ಬಾರಿ ಆಕಾಶದಲ್ಲಿ ತಾನೂ ಹಕ್ಕಿಯಂತೆ ಹಾರುವ ಹಾಗೆ ಕನಸು ಬಿದ್ದಿತ್ತು. ಹಾಗೆ ಹಾರುತ್ತಾ ಬೆಟ್ಟಕ್ಕೆ ಡಿಕ್ಕಿ ಹೊಡೆದು ತಲೆ ಚೂರಾಗಿ ಭಯದಲ್ಲಿ ಚೀರುತ್ತಾ ಎದ್ದು ಕೂರುತ್ತಿದ್ದ. ಇವತ್ತು ಕನಸಿನಲ್ಲಿ ಬೆಟ್ಟಕ್ಕಿಂತ ಮೇಲೆ ಹಾರಬೇಕು ಎಂದುಕೊಂಡು ಮನೆಯೊಳಗೆ ಕಾಲಿಟ್ಟ. ಅಮ್ಮ ಅಡುಗೆ ಮಾಡುತ್ತಿದ್ದಳು. ಮನೆಯೆಲ್ಲ ಮಸಾಲೆಯ ಪರಿಮಳ ತುಂಬಿತ್ತು. ಮೂಗನ್ನು ಎರಡುಮೂರು ಬಾರಿ ಎಳೆದುಕೊಂಡ. 'ನಾಟಿಕೋಳಿ ಸಾರು' ಎಂದು ಕೂಗಿ ಕುಣಿದ. ಅಡುಗೆ ಮನೆಗೆ ನಡೆದ. ಅಮ್ಮನ ಪಕ್ಕದಲ್ಲಿ ನಿಂತು 'ನಂಗೆ ದಿನಾ ಏನೇನೋ ಕನಸು ಬೀಳುತ್ತೆ. ಹಾರಿದಂತೆ, ಈಜಿದಂತೆ, ಬಿದ್ದಂತೆ, ಏನಕ್ಕೋ ಹೆದರಿಕೊಂಡು ಓಡಿದಂತೆ... ನಿಂಗೆ ಯಾವ್ ಥರಾ ಬೀಳುತ್ತೆ ಅಮ್ಮಾ' ಎಂದು ಕೇಳಿದ.

ಅವಳು ಸ್ವಲ್ಪ ಹೊತ್ತು ಯೋಚಿಸಿ ನಂತರ 'ನಂಗೆ ದಿನಾ ಏನೂ ಬೀಳಲ್ಲ ಭಾಸ್ಕರ. ಆದ್ರೆ ಆವಾಗಾವಾಗ ಬೀಳುತ್ತೆ. ದೊಡ್ಡದಾದ ರಾಗಿಹೊಲ. ನಡುವೆ ಅವರೆ, ಜೋಳ, ಸಜ್ಜೆ, ಹುಚ್ಚೆಳ್ಳು ಸಾಲು. ರಾಗಿಹೊಲದ ತುಂಬಾ ಹಳದಿ ಹೂಬಿಟ್ಟು ನಗುವ ಸಾಸುವೆ. ಹೊಲದ ಸುತ್ತಲೂ ಕಾವಲು ಕಾಯುವ ತೊಗರಿ, ಹಲಸಂದಿ, ಹೆಸರು... ಮೇಲೆ ಹಕ್ಕಿಗಳು, ಚಿಟ್ಟೆಗಳು. ಕೆಳಗೆ ಇಲಿ, ಹಾವು, ಕಪ್ಪೆ, ಎರೆ, ಇರುವೆ. ಆ ಹೊಲದ ಮಧ್ಯೆ ಲಂಗ ತೊಟ್ಟು ಕುಣಿವ ನಾನು. ಹೀಗೆ... ಇಷ್ಟೇ...' ಎಂದು ನುಡಿದಳು.

'ಆ ಥರಾ ಈಗೆಲ್ಲಿದೆ? ನನ್ನೂ ಕರ್ಕೊಂಡೋಗು.'

'ನನ್ನ ಕನಸಲ್ಲಿ. ಬರ್ತೀಯ. ಇವತ್ತಿಂದ ನೀನೂ ಬಂದ್ಬಿಡು.'

'ವ್ಹೋಗಮ್ಮ ನೀನು. ನಿಂಗಿಂತ ಶಂಕರಣ್ಣಾನೆ ವಾಸಿ' ಎಂದು ನುಡಿದು ಆಚೆ ನಡೆದು ಆಕಾಶ ನೋಡಿದ.

ಒಂದೆರಡು ಚುಕ್ಕಿಗಳು ಕಂಡವು. ಪೂರ್ತಿ ಕತ್ತಲಾದರೆ ಇನ್ನೂ ಜಾಸ್ತಿ ಕಾಣಿಸ್ತಾವೆ ಎಂದುಕೊಂಡು ಮತ್ತೆ ಒಳಗೆ ಬಂದ.

'ಅಮ್ಮಾ, ಇವತ್ತು ರಾತ್ರಿ ಆಚೆ ಮಲಕ್ಕೋತೀನಿ. ಎಷ್ಟು ಚುಕ್ಕಿ ಕಾಣಿಸ್ತಾವೋ ನೋಡ್ಬೇಕು' ಎಂದು ನುಡಿದ.

'ಏ... ಈಗ ಕಮ್ಮಿ ಇದಾವೆ ಬಿಡು. ನಾನು ಚಿಕ್ಕೋಳಿದ್ದಾಗ ಇದರ ಹತ್ತುಪಟ್ಟು ಜಾಸ್ತಿ ಇದ್ವು.'

'ಈಗ ಮತ್ತೆಲ್ಲಿ ಹೋದ್ವು?'

'ಕರೆಂಟು ಅಂದ್ರೆ ಅವಕ್ಕೆ ಭಯ. ಅದ್ಕೆ ಓಡೋದ್ವು. ಗುಂಡಿಗೆ ಇರೋ ಒಂದಷ್ಟು ಉಳಕೊಂಡ್ವು.'

'ಹೌದಾ... ಪ್ಚ್. ಅಮ್ಮಾ, ಈ ಭೂಮಿ ಮೇಲಿರೋ ಕರೆಂಟೆಲ್ಲಾ ಹೋಗ್ಬಿಟ್ರೆ ಎಷ್ಟು ಚುಕ್ಕಿ ಕಾಣಿಸ್ತಾವಲ್ಲ...'

'ಕುಡಿಯೋದು, ತಿನ್ನೋದು, ಓದೋದು... ಇನ್ನೂ ಏನೇನೋ ಇದಾವೆ. ಎಂಗ್ಲ...'

'ಮತ್ತೆ ಅಮ್ಮಾ, ಕಾಗೆ ಕೋತಿ ಎಲ್ಲಾ ಎಂಗಿದಾವೆ?' ಎಂದು ನುಡಿದವನೆ ತಾಯಿಯ ಕಡೆಗೆ ನೋಡಿದ. ಅವಳೂ ಮಗನ ಕಂಗಳನ್ನೇ ನೋಡಿದಳು. ಅವು ಚುಕ್ಕಿಗಳಂತೆಯೆ ಕಂಡವು.

ಮಾರನೆ ದಿನ ಮುಂಜಾನೆ ಎದ್ದವನೇ ಶಂಕರನ ಮನೆಗೆ ನಡೆದ. ರಾತ್ರಿ ಕನಸಿನಲ್ಲಿ ಒಬ್ಬನೇ ಬೆಟ್ಟ ಹತ್ತಿದ ವಿಷಯ ಅವನಿಗೆ ಹೇಳಬೇಕಿತ್ತು. ಅಲ್ಲಿ ಕೋತಿ ಜೊತೆ ಆಟ ಆಡಿದ್ದು, ಮೀನಿನ ಜೊತೆ ಈಜಿದ್ದು, ಗಿಳಿ ಹಣ್ಣು ಕೊಟ್ಟದ್ದು, ಕುದುರೆ ಸವಾರಿ ಮಾಡಿದ್ದು, ಚಿಟ್ಟೆ ಜೊತೆ ಕುಣಿದದ್ದು, ಮರ ಒಂದು ರೆಂಬೆಯಿಂದ ತನ್ನನ್ನು ಎತ್ತಿಕೊಂಡು ಮತ್ತೊಂದು ರೆಂಬೆಯ ಮೇಲೆ ಕೂರಿಸಿಕೊಂಡು ಜೇನು ತಿನ್ನಿಸಿದ್ದು... ಎಲ್ಲವನ್ನೂ ಖುಷಿಯಿಂದ ಹೇಳಿದ. ಹಾಗೆ ಹೇಳುವಾಗ ಅವನ ಕಂಗಳು ಹೂವಿನಂತೆ ಅರಳುತ್ತಿದ್ದವು. ಎಲ್ಲವನ್ನೂ ಕೇಳಿಸಿಕೊಂಡ ಶಂಕರ 'ಅಲ್ಲಿ ರಾಜ ಕಾಣಲಿಲ್ವ. ಕತ್ತಿ ಕೋವಿ ತಗೊಂಡು ಯುದ್ಧಕ್ಕೆ ಬರ್ಲಿಲ್ವೇನೋ' ಎಂದು ಕೇಳಿದ.

'ಇಲ್ಲಾ ಶಂಕರಣ್ಣ.'

'ಮತ್ಯಾರಿದ್ರೋ?'

'ನಾನಿದ್ದೆ ಶಂಕರಣ್ಣ' ಎಂದು ನುಡಿದ ಭಾಸ್ಕರ ಹೆಮ್ಮೆಯಿಂದ ನಿಂತುಕೊಂಡ.

'ಟೆಂಪಲ್ಲು? ಅದಾದ್ರು ಕಾಣಿಸ್ತೊ ಇಲ್ವೋ?'

'ಇಲ್ಲ ಶಂಕರಣ್ಣ. ಯಾಕೆ?'

'ಅದು ಹಾಗಲ್ಲ ಭಾಸ್ಕರ. ರಾಜರ ಕಾಲ ಮುಗಿದ ಮೇಲೆ ಎಲ್ಲಾ ಬೆಟ್ಟಗಳ ಮೇಲೆ ದೇವರು ಇರ್ತಾನೆ, ಅದ್ಕೆ ಕೇಳ್ದೆ.'

'ಓ, ಅಂಗಾದ್ರೆ ನಾನೂ ಬೆಟ್ಟದ ಮೇಲೆ ನಿಂತಿದ್ದೆ. ಸುತ್ತು ಊರುಗ್ಳು. ನಾನು ಮಾತ್ರ ಆಕಾಶದಲ್ಲಿ